ಹೊಸ ದಿಗಂತ

ಮಂಗಳೂರು
ಮಂಗಳವಾರ, 15 ಜುಲೈ 2014

e-paper: http://www.hosadigantha.in

## ಖಾಸಗಿ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆ ಶ್ರೀ ಕೃಷ್ಣ ಮಿಲ್ಕ್ಸ್‌ಗೆ ಈಗ ರಜತ ಸಂಭ್ರಮ

# ಪ್ರವರ್ತಕರ ಉಪಸ್ಥಿತಿಯಲ್ಲಿ ಸನ್ಮಾನ, ಗೌರವ



**ಮಂಗಳೂರು:** ಕರ್ನಾಟಕ ರಾಜ್ಯದ ಮೊದಲನೇ ಖಾಸಗೀ ಕ್ಷೇತ್ರದ ಹೈನೋದ್ಯಮ ಸಂಸ್ಥೆ ಶ್ರೀಕೃಷ್ಣ ಮಿಲ್ಕ್ಸ್ ಪ್ರೈ. ಲಿಮಿಟೆಡ್ ಸಂಸ್ಥೆಯ ರಜತ ಸಂಭ್ರಮವನ್ನು ಹುಬ್ಬಳ್ಳಿಯ ಡೆನಿಸನ್ಸ್ ಹೊಟೇಲ್‌ನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಐ.ಟಿ. ಉದ್ಯಮಿ, ವಿವೇಕ ಪವಾರ ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂಸ್ಥೆಯ ಪ್ರವರ್ತಕರಿಗೆ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ನೂತನ ಗುಲಾಬ್ ಜಾಮೂನ್ ಮತ್ತು ರಸಗುಲ್ಲ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು.

ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಹನುಮಂತ ಎಂ. ಪೈ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಮಾರ್ಗದರ್ಶಕರಾದ ವಿ.ಜಿ. ತುಲಪುಳೆ, ಡಾ. ಕೆ.ಎಸ್. ಶರ್ಮ, ಗ್ರಾಹಕರಾದ ಹೊಟೇಲ್ ಉದ್ಯಮದ ಅಗ್ರಗಣ್ಯರಾದ ಆರ್.ಆರ್. ಕಾಮತ್, ಶ್ರೀಕಾಂತ್ ಕೆಮ್ಮಟೂರ, ಇಸ್ಕಾನ್ ಸಂಸ್ಥೆಯ ಅಧ್ಯಕ್ಷ ರಾಜೀವ ಲೋಚನದಾಸ ಪ್ರಭುಜೀ ಅವರನ್ನು ಸಂಸ್ಥೆಯ ಚೇರ್ ಮನ್ ಜಿ.ಎಸ್.ಕಾಮತ್ ಮತ್ತು ನಿರ್ದೇಶಕರಾದ ಸತೀಶ್ ಎಂ. ಪೈ ಮತ್ತು ಮಹೇಶ್ ಕಾಮತ್ ಸನ್ಮಾನಿಸಿದರು.

ಸಂಸ್ಥೆಯಲ್ಲಿ 20 ವರ್ಷಗಳಿಗೂ ಮಿಕ್ಕಿ ಸೇವೆ ಸಲ್ಲಿಸಿದ ಸಿಬ್ಬಂದಿ ವರ್ಗದವರನ್ನು ಮತ್ತು ಹಾಲು ವಿತರಕರನ್ನೂ ಇದೇ ಸಂದರ್ಭ ಗೌರವಿಸಲಾಯಿತು. ಹುಬ್ಬಳ್ಳಿಯ ಗಣ್ಯ ಆರ್. ಎನ್. ನಾಯಕ್, ಡಾ. ಎಂ.ಎಂ. ಜೋಶಿ, ಡಾ. ರಾಜನ್ ದೇಶಪಾಂಡೆ, ದಿನೇಶ್ ನಾಯಕ್, ರಮೇಶ ನಾಯಕ್ ಸಂಸ್ಥೆಯ ಅಭಿಮಾನಿಗಳು, ಸಿಬ್ಬಂದಿಗಳು, ಹಾಲು ವಿತರಕರೂ ಸೇರಿದಂತೆ ಸಾವಿರಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಜನತೆ ಪಾಲ್ಗೊಂಡಿದ್ದರು. ಈ ಸಂದರ್ಭ ಪ್ರಾಣೇಶ್ ಮತ್ತು ಬಳಗ ನಡೆಸಿಕೊಟ್ಟ ಹಾಸ್ಯ ಸಂಜೆ ಎಲ್ಲರನ್ನು ರಂಜಿಸಿತು. ನರೇಂದ್ರ ನಿರೂಪಿಸಿದರು. ಸತೀಶ್ ಎಂ. ಪೈ ವಂದನಾರ್ಪಣೆಗೈದರು. ಸಂಸ್ಥೆಯ ಪ್ರವರ್ತಕರಾದ ಜಿ. ಎಸ್. ಕಾಮತ್, ಪ್ರದೀಪ ಜಿ. ಪೈ, ದಿನೇಶ ಆರ್. ಪೈ ಮತ್ತು ಶ್ಯಾಮ ಕಾಮತ್ ಉಪಸ್ಥಿತರಿದ್ದರು.